ದಿನಾಂಕ 15.06.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಎಸ್ ಕೆ ಯು ರವರಿಂದಃ

ವಾದಿಯ ತಂದೆ ಶಾಲೆಗೆ ಹಾಜರುಪಡಿಸಿದ ಡಿಕ್ಲರೇಷನ್ ಅನ್ನು ನಿಪಿ1 ಎಂದು, ಎಸ್ ಎಸ್ ಎಲ್ ಸಿ ಯ ವರ್ಗಾವಣೆ ಪ್ರಮಾಣ ಪತ್ರವನ್ನು ನಿಪಿ 2 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಫಾರಂ ನಂಬರ್ 7 ರ ದೃಢೀಕೃತ ನಕಲನ್ನು ನಿಪಿ3 ಎಂದು, ವಾದಿಯ ತಂದೆಯ ಹೇಳಿಕೆಯ ದೃಢೀಕೃತ ನಕಲನ್ನು ನಿಪಿ4 ಎಂದು, ಭೂ ನ್ಯಾಯ ಮಂಡಳಿಯ ಆದೇಶ ಪುಟದ ದೃಢೀಕೃತ ನಕಲನ್ನು ನಿಪಿ5 ಎಂದು, ಭೂ ನ್ಯಾಯ ಮಂಡಳಿಯ ಆದೇಶದ ದೃಢೀಕೃತ ನಕಲನ್ನು ನಿಪಿ6 ಎಂದು, ಫಾರಂ ನಂಬರ್ 10 ರ ದೃಢೀಕೃತ ನಕಲನ್ನು ನಿಪಿ 7 ಎಂದು, ವಾದಿಯ ತಂದೆಯ ಮರಣ ಪ್ರಮಾಣ ಪತ್ರವನ್ನು ನಿಪಿ 8 ಎಂದು, ದಾವಾ ಆಸ್ತಿಯ ಮ್ಯುಟೇಷನ್ ರಿಜಿಸ್ಟರ್ ಪ್ರತಿಗಳನ್ನು ನಿಪಿ 9 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಆರು ಪಹಣಿ ಪತ್ರಿಕೆಗಳನ್ನು ನಿಪಿ 10 ರಿಂದ ನಿಪಿ15 ಎಂದು, ಕಾನೂನು ತಿಳುವಳಿಕೆ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ16 ಎಂದು, 8 ಅಂಚೆ ಸ್ವೀಕೃತಿಗಳನ್ನು ನಿಪಿ 16(ಎ) ಯಿಂದ ನಿಪಿ16(ಹೆಚ್) ಎಂದು, 6 ನೇ ಮತ್ತು 7 ನೇ ಪ್ರತಿವಾದಿಗಳಿಗೆ ಜಾರಿಯಾಗದೆ ಹಿಂತಿರುಗಿದ ಅಂಚೆ ಲಕೋಟೆಗಳನ್ನು ನಿಪಿ 17 ಮತ್ತು ನಿಪಿ18 ಎಂದು, ಎಂದು, ಅದರೊಳಗಿನ ನೋಟೀಸಿನ ಕಚೇರಿ ಪ್ರತಿಗಳನ್ನು ನಿಪಿ17(ಎ) ಮತ್ತು ನಿಪಿ18(ಎ) ಎಂದು ಗುರುತಿಸಲಾಯಿತು.

1 ರಿಂದ 9 ನೇ ಪ್ರತಿವಾದಿ ಪರ ವಕೀಲರು ಹಾಜರಿಲ್ಲದ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು. 10 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

ನ್ಯಾಯಾಲಯದ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

This is a True Copy of the Court Records Online. Authenticated @ districts.ecourtsindia.com/cnr/KADK020007222021/truecopy/order-3.pdf

www.ecourtsindia.com

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆ ಹಿ ಸಿ ನ್ಯಾಯಾಧೀಶರು,
ದ.ಕ. ಮಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KADK020007222021/truecopy/order-3.pdf

www.ecourtsindia.com